ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ
ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ



ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕೆ ಪತ್ರ ಬರೆಯಬಹುದು

ನಮ್ಮ ವಿಳಾಸ :
The Christadelphians
PO Box **4237**
Bangalore 560042

ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 17



* ನಾನು ನಿಮಗೆ ವಿಶ್ರಾಂತಿ ಕೊಡುವೆನು
* ನಾಲಿಗೆಯನ್ನು ನಿಯಂತ್ರಿಸುವುದು (ಭಾಗ–1)
* ವಸ್ತ್ರಕ್ಕೆ ತ್ಯಾಪೆ ಹಚ್ಚುವುದು ಮತ್ತು ಬುದ್ದಲಿಗಳು

ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಆಧಾರವಾಗಿ ಜೀವನವನ್ನು ನಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

Co-ordinator : Linus Daniel

e-mail :
info@choose2live.info
http://www.choose2live.info/noothana_shristi

Contact:
The Christadelphians,
P.O.Box No 535,
Bangalore 560 005,
India.

ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಪುನರವಲೋಕನ, ಮತ್ತು ಡಿ.ಟಿ.ಪಿ ಸಂಯೋಜಕರು.

ರೀಟಾ ಸತ್ಯರಾಜ್
ನರೋನ್ ದೇವ್ } ಭಾಷಾಂತರಕಾರರು

ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.

ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]

ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು

ತಂತ್ರಜ್ಞಾನ ಹೆಚ್ಚಿದಂತೆ ಜೀವನ ಹೆಚ್ಚು ಆರಾಮದಾಯಕವಾಗುತ್ತದೆ ಎಂಬ ವಿಚಾರವು ಪ್ರಚಲಿತವಾಗಿತ್ತು. ಕೆಲಸ ಕಡಿಮೆಯಾಗಿ ವಿರಾಮ ಹೆಚ್ಚುವ ನಿರೀಕ್ಷೆಯಿತ್ತು. ಆದರೆ ಈಗ ನಡೆಯುತ್ತಿರುವುದು ಇದಕ್ಕೆ ತದ್ವಿರುದ್ಧವಾಗಿದೆ. ಈ-ಮೇಲ್ ಮತ್ತು ಮೊಬೈಲ್ ಫೋನ್ ಉಪಯೋಗಿಸುವವರಿಗೆ ಇದು ಚೆನ್ನಾಗಿ ಅನುಭವಕ್ಕೆ ಬಂದಿದೆ. ಇಂದಿನ ಜೀವನದಲ್ಲಿ ಕಾರ್ಯ ಬಾಹುಳ್ಯದಿಂದ ವಿಶ್ರಾಂತಿ, ವಿರಾಮ ಪಡೆಯುವುದು ಕಷ್ಟವಾಗಿದೆ, ಆದರೆ ಈ ಕೆಳಗೆ ಕೆನ್ ಬರ್‌ಹ್ಯಾಮ್ ಅವರು ವಿವರಿಸುವ ಹಾಗೆ ನಮಗೆ ವಿಶ್ರಮಿಸಲು ಸಹಾಯ ಮಾಡುವ ವ್ಯಕ್ತಿಯಾಗಿದ್ದಾರೆ.

ಅವಸರದ ಜೀವನ :-

ಇಂದಿನ ಸಮಾಜದ ಇಡೀ ರಚನೆಯಲ್ಲಿ ವ್ಯಕ್ತವಾಗಿರುವುದು, ಸದಾ ಹೆಚ್ಚುತ್ತಾ ಸಾಗಿರುವ ದೈನಂದಿನ ಜೀವನದ ಗತಿ, ನಿರಂತರ ಬದಲಾವಣೆಯಾಗಿದ್ದು, ಅದರಿಂದ ಹೆಚ್ಚು ಹೆಚ್ಚು ನಿರೀಕ್ಷಿಸಲಾಗುತ್ತಿದೆ. ಶ್ರಮಿಕರ ಸಂಖ್ಯೆಯನ್ನು ಕಡಿತಗೊಳಿಸಿ, ಕಡಿಮೆ ಜನರಿಂದ ಅದೇ ಪ್ರಮಾಣದ ಉತ್ಪಾದನೆಯನ್ನು ಎದುರುನೋಡಲಾಗುತ್ತಿದೆ.

ಆಧುನಿಕ ತಾಂತ್ರಿಕತೆಯು ಕೆಲಸದ ವೇಗವನ್ನು ತ್ವರಿತಗೊಳಿಸಿದೆ. ಉದಾಹರಣೆಗೆ ನಾವು ಧ್ಯಾನವಿಟ್ಟು ಬರೆದ ಪತ್ರಕ್ಕೆ ಈ-ಮೇಲ್ ಮುಖಾಂತರ ತಕ್ಷಣವೇ ಉತ್ತರ ಬರುತ್ತದೆ. ಟಪಾಲಿನಲ್ಲಿ ಉತ್ತರ ಬರುವತನಕ ಕಡತವನ್ನು ಬದಿಗಿಟ್ಟು ವಿರಮಿಸುವ ದಿನಗಳು ಈಗಿಲ್ಲ. ಈಗಿರುವುದು ಹೆಚ್ಚುತ್ತಿರುವ ಪೈಪೋಟಿಯನ್ನು ನಡಿಸುವ ಬಿಡುವಿಲ್ಲದ ಕಾರ್ಯಕ್ರಮಗಳು ಮತ್ತು ಬಿಗಿ ಸಮಯಾವಧಿಗಳು. ಕೆಲಸದಲ್ಲಿನ ವೈವಿಧ್ಯತೆಯೊಂದಿಗೆ ಬೇರೆ ಪ್ರದೇಶಗಳಿಗೆ ಸಂಚರಿಸುವ ಅಗತ್ಯ ಬೀಳುವುದರಿಂದ ಕೌಟುಂಬಿಕ ಜೀವನವೂ ಏರುಪೇರಾಗುವುದುಂಟು.

ಇಂದು ಅನೇಕ ಅಂಗಡಿಗಳು ದಿನದ ಇಪ್ಪತ್ನಾಲ್ಕು ಗಂಟೆಗಳು ತೆರೆದಿದ್ದು, ನಮ್ಮ ಜೀವನ ಪೂರ್ತಿಯಾಗಿ ಇರುವ ಪ್ರತ್ಯಕ್ಷ ಅಗತ್ಯಗಳನ್ನು ಲೌಕಿಕ ವಸ್ತುಗಳಿಂದ ತುಂಬಿಸುತ್ತಿವೆ. ಎಲ್ಲೆಲ್ಲಿಯೂ ಅವಸರ, ಅವಸರ, ಅವಸರ!

ಇತರ ಚಿಕಿತ್ಸೆಗಳು :–

ಈ ಎಲ್ಲಾ ಅವಸರದ ಪರಿಣಾಮವೆಂದರೆ ನಮ್ಮೆಲ್ಲರ ಮಾನಸಿಕ ಒತ್ತಡವು ಗಣನೀಯವಾಗಿ ಹೆಚ್ಚಾಗಿದೆ. ಜನರು ಹಿಂದೆಂದಿಗಿಂತಲೂ ಹೆಚ್ಚು ಕೆಲಸ ಮಾಡಬೇಕೆಂದೂ, ಕೆಲಸದ ಸ್ಥಳದಲ್ಲಿ ಹೆಚ್ಚು ಸಮಯ ಕಳೆಯುವುದಲ್ಲದೇ, ಮನೆಯಲ್ಲಿಯೂ ಕಛೇರಿಯ ಕೆಲಸವನ್ನು ಮಾಡಬೇಕೆಂಬ ನಿರೀಕ್ಷೆ ಇದೆ. ರಜೆಯ ದಿನಗಳಲ್ಲೂ ಕಛೇರಿಯೊಂದಿಗೆ ಸಂಪರ್ಕವಿಟ್ಟುಕೊಳ್ಳೂವುದು, ಕೆಲಸದ ನಿಮಿತ್ತವಾಗಿ ಪ್ರಯಾಣಗಳನ್ನು ಕೈಗೊಳ್ಳುವುದು ಮಾತ್ರವಲ್ಲ, ನಾವೂ ಇತರರ ಕೆಲಸಕ್ಕಾಗಿಯೇ ಬದುಕಿದ್ದೇವೆ ಎನ್ನುವಷ್ಟರ ಮಟ್ಟಿಗೆ ನಾವು ಕೆಲಸದಲ್ಲಿ ವ್ಯಸ್ತರಾಗಿದ್ದೇವೆ.

ಈ ಎಲ್ಲಾ ದುಡಿಮೆಯು ಜನರಲ್ಲಿ ಅನೇಕ ದೈಹಿಕ ಮತ್ತು ಮಾನಸಿಕ ಖಾಯಿಲೆಗಳಿಗೆ ಕಾರಣವಾಗಿರುವುದರಲ್ಲಿ ಆಶ್ಚರ್ಯವಿಲ್ಲ. ಈ ಖಾಯಿಲೆಗಳು ಯುವಕರು–ಮುದುಕರು, ಬಡವ–ಬಲ್ಲಿದ ಎಂಬ ಭೇದವಿಲ್ಲದೆ ಎಲ್ಲರಿಗೂ ತಾಕುತ್ತಿದ್ದು, ಜನರು ಪರಂಪರಾಗತ ಔಷದಗಳನ್ನು ಬಿಟ್ಟು ಹೊಸ ಚಿಕಿತ್ಸಾ ವಿಧಾನಗಳ ಬೆನ್ನು ಹತ್ತಿದ್ದಾರೆ, ದೈನಂದಿನ ಜೀವನದ ಒತ್ತಡಗಳನ್ನು ನಿವಾರಿಸಲು ಹೋಮಿಯೊಪತಿ, ಪ್ರತಿವರ್ತನಾ ಚಿಕಿತ್ಸೆ, ಸೂಚಿಭೇದ ಕಲ್ಪ ಮುಂತಾದುವುಗಳ ಮೊರೆಹೋಗುತ್ತಿದ್ದಾರೆ.

ಆರಾಮ ಪಡೆಯುವುದು :–

ವಿರೋಧಾಭಾಸವೇನೆಂದರೆ, ಈ ಆಧುನಿಕ ಕ್ಲೇಶಗಳಿಗೆ ಹೊಸ ಚಿಕಿತ್ಸೆಗಳಿಂದ ಆರಾಮ ದೊರಕುವುದಿಲ್ಲ. ನಾವು ಪೂರ್ಣ ವಿಶ್ವಾಸವಿಡಬಹುದಾದಂತಹ ಮತ್ತು ನಿಜಕ್ಕೂ ಪುರಾತನ ಬದಲೀ ಚಿಕಿತ್ಸಾ ಪದ್ಧತಿಯೆಂದರೆ ದೇವರ ವಾಕ್ಯ. ಇದು ಕಳೆದ ಅನೇಕ ತಲೆಮಾರುಗಳಿಂದ ಪರಿಶೋಧಿಸಲ್ಪಟ್ಟಿರುವಂಥದು, ಸತ್ಯವೇದವು ನಮಗೆ ಪಾಪ ವಿಮೋಚನೆಯೊಂದಿಗೆ ಯೇಸುಕ್ರಿಸ್ತನೊಡನೆ ನಿತ್ಯಜೀವದ ಆಶ್ವಾಸನೆಯನ್ನು ಕೊಟ್ಟಿದೆ. ಕ್ರಿಸ್ತೇಸು ನಮಗೆ ದೊರಕಬಹುದಾಂತಹ ಅತ್ಯುತ್ತಮ ಸಂಗಾತಿ. ಯೇಸುಕ್ರಿಸ್ತನ ಮೇಲಿನ ವಿಶ್ವಾಸದಿಂದ ಒಂದು ಹೊಸ ಮತ್ತು ವಿಭಿನ್ನ ರೀತಿಯ ಸ್ವತಂತ್ರ ಜೀವನದ ಸಾಧ್ಯತೆಯನ್ನು ಸತ್ಯವೇದದಲ್ಲಿ ಸ್ಪಷ್ಟಪಡಿಸಲಾಗಿದೆ. ಸತತ ಪ್ರಾರ್ಥನೆಯ ಮೂಲಕ ಧರ್ಮಶಾಸ್ತ್ರದಲ್ಲಿ ಸತ್ಯಶೋಧನೆ ಮಾಡಿದಲ್ಲಿ, ಈ ಜೀವನವನ್ನು ಪಡೆಯುವುದು ಕಷ್ಟವೇನಲ್ಲ. ಯೇಸು ಕ್ರಿಸ್ತನು ಸ್ವತಃ ಈ ಪ್ರಮಾಣದ ಮೂಲಕ ನಮ್ಮನ್ನು ಉತ್ತೇಜಿಸುತ್ತಾನೆ–"ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು; ಹುಡುಕಿರಿ, ನಿಮಗೆ ಸಿಕ್ಕುವುದು; ತಟ್ಟಿರಿ, ನಿಮಗೆ ತೆರೆಯುವುದು, ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನೂ ಹೊಂದುವನು, ಹುಡುಕುವವನಿಗೆ ಸಿಕ್ಕುವುದು, ತಟ್ಟುವವನಿಗೆ ತೆರೆಯುವುದು" (ಲೂಕ 11:9–10).

ಕಷ್ಟದ ಅನುಭವವು ಯೇಸುಕ್ರಿಸ್ತನಿಗೆ ಇರುವುದರಿಂದ, ನಮ್ಮ ಕಷ್ಟಗಳನ್ನು ಆತನು ಸಹಾನುಭೂತಿಯಿಂದ ಕಾಣುತ್ತಾನೆ. ನಾವು ಯೇಸುಕ್ರಿಸ್ತನನ್ನು ಅವನ ಉಪಕಾರವನ್ನೂ

ಸ್ಮರಿಸುವಾಗೆಲ್ಲಾ ಮುಖ್ಯಸಂಗತಿಯಾದ ಆತನ ಸಹಾನುಭೂತಿಯನ್ನು ಜ್ಞಾಪಕಮಾಡಿಕೊಳ್ಳಬೇಕು. ಆತನು ಹುಟ್ಟುವ ಬಹಳ ಹಿಂದೆಯೇ ಯೆಶಾಯ ಪ್ರವಾದಿಯು ಹೀಗೆ ತಿಳಿಸಿದ್ದಾನೆ–"ಆತನು ಸಂಕಟಪಡುವವನೂ, ಧಿಕ್ಕಾರಕ್ಕೆ ಒಳಗಾದವನೂ ಆಗಿದ್ದನು"(ಯೆಶಾಯ 53:3).

ನಿರಾಶೆಯಲ್ಲ, ನಿರೀಕ್ಷೆ :–

ಮನುಷ್ಯರಿಗೆ ಸಹಜವಾದ ದಿನನಿತ್ಯದ ಕಷ್ಟಕಾರ್ಪಣ್ಯಗಳನ್ನು ತಾಳಿಕೊಳ್ಳುವದರ ಜೊತೆಗೆ, ದೇವರ ನಿಜವಾದ ಕುಮಾರನಾಗಿರುವುದೂ ಯೇಸುಕ್ರಿಸ್ತನ ಗುರಿಯಾಗಿದ್ದಿತು. ದೇವರ ನಿಯಮಗಳನ್ನು ಅನುಸರಿಸಬೇಕಾದಾಗ ಒದಗುವ ಶೋಧನೆಗಳನ್ನು ಆತನು ಎದುರಿಸಬೇಕಾಯಿತು ಎನ್ನುವುದು ಇದರ ತಾತ್ಪರ್ಯ. ಈ ಕಷ್ಟಗಳನ್ನು ಆತನು ಸದಾ ಅನುಭವಿಸುತ್ತಾ, ಹೋರಾಟದಲ್ಲಿ ಜಯಶಾಲಿಯಾದನು. ಏಕಂದರೆ ಆತನು ಜೀವನದಲ್ಲಿ ಯಾವ ಪಾಪವನ್ನು ಮಾಡದೆ ಸತ್ತನು. ಅಪೋಸ್ತಲನಾದ ಪೇತ್ರನ ಈ ಮಾತುಗಳು ಹೊಸಒಡಂಬಡಿಕೆಯಲ್ಲಿಯೇ ಮಹತ್ವದ ಜಯಘೋಷವಾಗಿದೆ–"ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು. ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ"(1ಪೇತ್ರ 2:21–22).

ಈ ವಿಜಯದ ಬಗ್ಗೆ ಪೇತ್ರನು ಮತ್ತೊಂದು ಕಡೆ ಹೀಗೆ ತಿಳಿಸಿದ್ದಾನೆ, ಯೇಸುಕ್ರಿಸ್ತನ ಪರಿಶುದ್ಧ ಜೀವನದ ನಿಮಿತ್ತ, ಕ್ರೂರ ಶಿಲುಬೆಯ ಮರಣದ ನಂತರ–"ಆತನನ್ನು ದೇವರು ಮರಣ ವೇದನೆಗಳಿಂದ ಬಿಡಿಸಿ ಎಬ್ಬಿಸಿದನು; ಯಾಕಂದರೆ ಮರಣವು ಆತನನ್ನು ಹಿಡಿಕೊಂಡಿರುವುದು ಅಸಾಧ್ಯವಾಗಿತ್ತು"(ಅ.ಕೃ.2:24). ದೇವರ ನ್ಯಾಯದಲ್ಲಿ ಮರಣವು ಪಾಪದ ಫಲವಾಗಿ ಬರುವಂಥದು, ಆದಕಾರಣ ಪಾಪವನ್ನೇ ಮಾಡದ ಯೇಸುಕ್ರಿಸ್ತನನ್ನು ಸಮಾಧಿಯಲ್ಲಿ ಬಿಡುವುದು ಸಾಧ್ಯವಿರಲಿಲ್ಲ. ಮರಣದ ಮೇಲಿನ ಯೇಸುಕ್ರಿಸ್ತನ ವಿಜಯವು ಅವರ ಹಿಂಬಾಲಕರಿಗೆ ಇತ್ತ ಕೊಡುಗೆಯಾಗಿದೆ. ಈ ಕೊಡುಗೆಗಾಗಿ ಕ್ರೈಸ್ತರು ವಿಶ್ವಾಸದ ಜೀವನವನ್ನು ಜೀವಿಸುತ್ತಾ ಕಾದಿರಬೇಕು. ವಿಶ್ವಾಸದ ಜೀವನವು ಸುಲಭಸಾಧ್ಯವಲ್ಲದಿದ್ದರೂ, ಅದು ಸಕಾರಾತ್ಮಕವಾಗಿದ್ದು, ನಿರೀಕ್ಷೆಯಿಂದ ತುಂಬಿದೆ. ಅದರ ಅನೇಕ ಲಾಭಗಳಲ್ಲಿ ಒಂದು ಲೌಕಿಕ ಜೀವನದ ಒತ್ತಡಗಳಿಂದ ನಿಜವಾದ ಸ್ವಾತಂತ್ರ್ಯದ ಅನುಭವವಾಗುತ್ತದೆ ಎಂಬುದು. ಯೇಸುಕ್ರಿಸ್ತನು ಇದನ್ನು ಸಮರ್ಥಿಸುತ್ತಾ ಹೀಗೆ ತಿಳಿಸಿದ್ದಾನೆ–"ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು. ನಾನು ಸಾತ್ವಿಕನೂ, ದೀನಮನಸ್ಸುಳ್ಳವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವುದು. ಯಾಕಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹಗುರವಾದದ್ದು" (ಮತ್ತಾಯ 11:28–30).

–ಕೆನ್ ಬರ್‌ಹ್ಯಾಮ್

• • • • • • • • • • • • •

ನಾಲಿಗೆಯನ್ನು ನಿಯಂತ್ರಿಸುವುದು

(ಭಾಗ – 1)

ಪೀಠಿಕೆ :–

ನಿಮಗೆ ತಿಳಿದಿರುವ ಪ್ರಕಾರ, ಒಂದು ಆನೆಯು ಸಾಧಾರಣವಾಗಿ ಒಬ್ಬ ಮಾವುತನಿಗಿಂತ 50 ಪಟ್ಟು ದೊಡ್ಡದಾಗಿರುತ್ತದೆ. ''**ಮಾವುತ**'' ಈ ಶಬ್ದವು ಹಿಂದಿ ಭಾಷೆಯಿಂದ ಬಂದಿರುವುದಾಗಿದೆ, ಸಂಸ್ಕೃತದ ಮೂಲ ''**ಮಹಾಮಾತ್ರ**'', ಅದರ ಅರ್ಥ ಮಹಾ ಅಳತೆಯುಳ್ಳದ್ದು.

ಒಂದು ಸಾಧಾರಣವಾದ ಆಯುಧವನ್ನು ಮಾವುತನು ಉಪಯೋಗಿಸುವುದು, ಅದೇ ''**ಅಂಕುಶ**''ವಾಗಿದೆ, ಅದು ಚೂಪಾದ ಮೊನೆಯುಳ್ಳದ್ದಾಗಿರುತ್ತದೆ, ಅದನ್ನು ಆನೆಯ ತಲೆಯ ಹಿಂಬಾಗವನ್ನು ಚುಚ್ಚುತ್ತಾನೆ ಆನೆಯನ್ನು ಪಳಗಿಸುವುದಕ್ಕಾಗಿ. ಹಾಗೆಯೇ ಬೇರೆಬೇರೆ ವಿಧಾನಗಳ ಮೂಲಕ ಹಲವಾರು ಜಾತಿಯ ಪ್ರಾಣಿಗಳನ್ನು ಮಾನವನು ತನ್ನ ಜಾಣ್ಮೆಯಿಂದ ಪಳಗಿಸಬಲ್ಲನು. ಓರ್ವ ರಷ್ಯಾ ದೇಶದ ಸರ್ಕಸ್‌ನವಳಾದ ಇರಿನಾ ಭಗ್ರಿಮುವಾಳು ತನ್ನ 91ನೇ ವರ್ಷದ ತನಕ ಸರ್ಕಸ್ಸಿನ ರಿಂಗಿನೊಳಗಡೆ, ಸಿಂಹಗಳನ್ನು ಪಳಗಿಸುತ್ತಿದ್ದಳು, ಮತ್ತು ಸಿಂಹಗಳು ಕ್ರಿಯಾಬದ್ಧವಾಗಿ ''**ಇರಿನಾ**''ಳ ಅಧೀನವಾಗಿ ಹೆದರಿ ಕ್ರಿಯಾಶೀಲವಾಗಿರುವಂತೆ ಅವುಗಳನ್ನು ಇಟ್ಟಿದ್ದಳು. ಇದು ಹೇಗೆ ಸಾಧ್ಯ! ಆಕೆಯ ದೃಢಸಂಕಲ್ಪವೇ ಅಲ್ಲವೇ. ವಾಸ್ತವವಾಗಿ ಸಿಂಹಗಳು ಪ್ರಪಂಚದಲ್ಲಿನ ಅತಿ ಸಾಮರ್ಥ್ಯವುಳ್ಳ, ವೇಗಗತಿಯುಳ್ಳ, ಕ್ರೂರಪ್ರಾಣಿಯಾಗಿರುವುದನ್ನು ನಾವು ತಿಳಿದಿದ್ದೇವೆ. ಆದರೆ ಇಷ್ಟೆಲ್ಲಾ ಶಕ್ತಿಸಾಮರ್ಥ್ಯವುಳ್ಳ ಪ್ರಾಣಿ ಮಾನವನ ಕೈಯಲ್ಲಿ ಸಿಕ್ಕಿಕೊಂಡು ಸರ್ಕಸ್ಸಿನಲ್ಲಿ ಕ್ರಮಬದ್ಧವಾಗಿ ವರ್ತಿಸುವುದು, ಅವುಗಳ ಪಂಜರದಲ್ಲಿ ಒಂದು ಕುರ್ಚಿಯಲ್ಲಿ ಕುಳಿತು ಅದರ

ಗುರುವಿನ ಆಜ್ಞೆಗಳಿಗೆ ನಮ್ರತೆಯಿಂದ ವರ್ತಿಸುವುದನ್ನು ನೋಡುವಾಗಿ ಆಶ್ಚರ್ಯವಾಗಿ ನಮಗೆ ಕಾಣುತ್ತದೆ. ಅದೇ ರೀತಿ ಒಂದು ಸಿಂಹವನ್ನು ನಾವು ನಾಲ್ಕು ಕಾಲುಗಳಿರುವ ಕುರ್ಚಿಯ ಮೂಲಕ ಒಂದು ಗಡಿಯಾರದಂತೆ ಚಲಿಸಿ ಕಾಲುಗಳನ್ನು ನಿಯಂತ್ರಿಸುತ್ತಾ ಆಚೆಈಚೆ ತಿರುಗುವುದರ ಮೂಲಕ ಆತನು(ಸರ್ಕಸ್ಸಿನವನು) ಅದನ್ನು ಪಳಗಿಸುವನು. ಈ ಪರಿಸ್ಥಿಯಲ್ಲಿ ವ್ಯಸ್ಥವಾದ ಸಿಂಹವು ತನ್ನ ನಿಜ ಪಥವನ್ನು ಕಂಡುಹಿಡಿಯಲು ಒದ್ದಾಡುತ್ತಾ ಸುಸ್ತಾಗುವುದು.

ಮಾನವನು ಎಲ್ಲಾ ಪ್ರಾಣಿ ಪಕ್ಷಿಗಳನ್ನು ತನ್ನ ಇಚ್ಛೆಗೆ ತಕ್ಕಂತೆ ಪಳಗಿಸುವುದನ್ನು ಕಲಿತಿದ್ದಾನೆ. ಆದರೆ ನಾಲಿಗೆಯನ್ನು ಕುರಿತು ಏನಾಗಿದ್ದಾನೆ? ಎಂಬ ವಿಷಯವಾಗಿ ಅಪೋಸ್ತಲನಾದ ಯಾಕೋಬನು ಬಹಳ ವಿಶೇಷವಾಗಿ ತಿಳಿಸಿದ್ದಾನೆ–''ನರಜಾತಿಯು ಸಕಲ ಜಾತಿಯ ಮೃಗ ಪಕ್ಷಿ ಕ್ರಿಮಿ ಜಲಚರಗಳನ್ನೆಲ್ಲಾ ಹತೋಟಿಗೆ ತರುವುದುಂಟು ಮತ್ತು ತಂದದ್ದುಂಟು. ಆದರೆ ನಾಲಿಗೆಯನ್ನು ಯಾವ ಮಾನವನೂ ಹತೋಟಿಗೆ ತರಲಾರನು. ಅದು ಸುಮ್ಮನಿರಲಾರದ ಕೆಡುಕಾಗಿದೆ. ಮರಣಕರವಾದ ವಿಷದಿಂದ ತುಂಬಿ ಇದೆ. ನಾಲಿಗೆಯಿಂದ ತಂದೆಯಾದ ದೇವರನ್ನು ಕೊಂಡಾಡುತ್ತೇವೆ; ಅದರಿಂದಲೇ ದೇವರ ಹೋಲಿಕೆಗೆ ಸರಿಯಾಗಿ ಉಂಟುಮಾಡಲ್ಪಟ್ಟ ಮನುಷ್ಯರನ್ನು ಶಪಿಸುತ್ತೇವೆ. ಅದೇ ಬಾಯಿಂದ ಸ್ತುತಿಶಾಪ ಎರಡೂ ಬರುತ್ತವೆ. ನನ್ನ ಸಹೋದರರೇ ಹೀಗಿರುವುದು ಯೋಗ್ಯವಲ್ಲ. ಊಟೆ(ನೀರಿನ ಬುಗ್ಗೆ)ಯ ಒಂದೇ ಬಾಯಿಂದ ಸಿಹಿನೀರು ಕಹಿನೀರು ಎರಡೂ ಹೊರಡುವುದುಂಟೇ? ನನ್ನ ಸಹೋದರರೇ, ಅಂಜೂರದ ಮರವು ಎಣ್ಣೇ ಮರದ ಕಾಯಿ ಬಿಡುವುದೋ? ದ್ರಾಕ್ಷೇ ಬಳ್ಳಿಯಲ್ಲಿ ಅಂಜೂರದ ಹಣ್ಣಾಗುವುದೋ? ಹಾಗೆಯೇ ಉಪ್ಪು ನೀರಿನ ಬಾವಿಯಿಂದ ಸಿಹಿನೀರು ಬರುವುದಿಲ್ಲ'' (ಯಾಕೋಬ 3:7–12).

ಅಂತೆಯೇ ಸಾಮಾನ್ಯವಾಗಿ ದೇವರು ನಮಗೆ ಕೊಟ್ಟಿರುವ ನಾಲಿಗೆಯನ್ನು ದುರುಪಯೋಗ ಮಾಡುವೆಲ್ಲವೇ? ಅಪೋಸ್ತಲನಾದ ಯಾಕೋಬನು ನಮಗೆ ಎಚ್ಚರಿಕೆ

ಕೊಟ್ಟಿದ್ದಾನೆ **"ಹೀಗಿರಬಾರದು"**. ಹೀಗಿರಲಾಗಿ ನಾವು ಏನಾದರು ನಾಲಿಗೆಯನ್ನು ಸರಿಯಾಗಿ ಉಪಯೋಗಿಸದಿದ್ದರೆ ನಿತ್ಯಜೀವದ ಪಾಲುದಾರಿಕೆಯಲ್ಲಿ ಭಾಗಿಗಳಾಗಲು ಸಾಧ್ಯವಿಲ್ಲ. ಈ ವಿಷಯವಾಗಿ ಜ್ಞಾನೋಕ್ತಿಗಳ ಪುಸ್ತಕದಲ್ಲಿ ಬೋಧಿಸಲಾಗಿದೆ. ನಾಲಿಗೆಯ ಮಹತ್ವವನ್ನು ಸರಳ ಶಬ್ದಗಳ ಪರಿಣಾಮವನ್ನು ತಿಳಿಸಿದೆ. "***ಜೀವ ಮರಣಗಳು ನಾಲಿಗೆಯ ವಶ,*** ವಚನಪ್ರಿಯರು ಅದರ ಫಲವನ್ನು ಅನುಭವಿಸುವರು" (ಜ್ಞಾನೋಕ್ತಿಗಳು 18:21). ಈ ಬೋಧನೆಯು ನಮ್ಮ ನಾಲಿಗೆಯನ್ನು ನಿಯಂತ್ರಿಸುವ, ಪಳಗಿಸುವ ಮಹತ್ವವನ್ನು ಕಲಿಸುವಂತದ್ದಾಗಿದೆ ಪ್ರಿಯರೇ.

ನಾಲಿಗೆಯ ಸಾಮರ್ಥ್ಯ :-

ನಿತ್ಯಜೀವವನ್ನು ಪಡೆಯಬೇಕಾದರೆ ನಮ್ಮ ಈ ಜೀವಿತದಲ್ಲಿ ಈ ನಾಲಿಗೆಯ ಕ್ರಿಯೆಯ ಮೂಲಕ ನಿರ್ಧಾರವಾಗುವಂತದ್ದು ಆಗಿದೆ. ನಾಲಿಗೆಯು ನಮಗೆ ಜೀವವನ್ನು ನೀಡುವ ಸಾಮರ್ಥ್ಯ ಹೊಂದಿದೆ ಮತ್ತು ಅದೇ ಸಮಯದಲ್ಲಿ ನಾಲಿಗೆಯು ವಿಷವನ್ನು ಕಾರುವಂತಹದು ಆಗಿದ್ದು ನಮ್ಮನ್ನು ನಾಶಗೊಳಿಸಬಹುದಾಗಿದೆ. ಏಕಂದರೆ ನಮ್ಮ ನುಡಿಗಳಲ್ಲಿ ಅಂತಹ ಸಾಮರ್ಥ್ಯವಿದೆ!

* ಸತ್ಯವೇದದಲ್ಲಿನ ***ಸುವಾರ್ತೆ*** ವಾಕ್ಯಗಳನ್ನು ನಾವು ಸದಾ ಆಲಿಸುವುದಾದರೆ, ಅವುಗಳು ನಮ್ಮನ್ನು ಕಾಪಾಡುತ್ತವೆ. ಅವುಗಳಲ್ಲೇ ನಾವು ಮುಳುಗಿದ್ದರೆ(ತಲ್ಲೀನವಾಗಿದ್ದರೆ) ನಮ್ಮ **ನಂಬಿಕೆ** ಇನ್ನಷ್ಟು ಹೆಚ್ಚುವುದು.

* ನುಡಿಗಳು ಒಬ್ಬರಲ್ಲಿ **ಪ್ರಭಾವ** ಬೀರಲು ಸಾಮರ್ಥ್ಯವುಳ್ಳವುಗಳು. ಉದಾ: ಆದಾಮನು ಹವ್ವಳ ಮಾತಿಗೆ ಪ್ರಭಾವಿತನಾದನು, ದಾವೀದನು ಅಬೀಗೈಲಳ ಮಾತಿಗೆ ಪ್ರಭಾವಿತನಾದನು, ಇತ್ಯಾದಿ.,

* ತಪ್ಪಾದ ಶಬ್ದಗಳು ಬಾಯಿಂದ ಹೊರಬಂದರೆ ಕೇಳುವವರ ಮೇಲೆ ಕೆಟ್ಟ ಪರಿಣಾಮ ಬೀರಲು ಸಾಧ್ಯ.

"**ಕತ್ತಿತಿವಿದ** ಹಾಗೆ ದುಡುಕಿ ಮಾತನಾಡುವವರುಂಟು" (ಜ್ಞಾನೋಕ್ತಿ 12:18). ಅಜಾಗರೂಕನ ಮಾತುಗಳ ಮೂಲಕ ಒಬ್ಬನು ಇರಿಯಲ್ಪಡಲು ಸಾಧ್ಯ, ಆ ರೀತಿಯ ಮಾತುಗಳಿಂದ ತಿವಿಯುವ ಖಡ್ಗದಂತೆ ಒಬ್ಬನು ನಶಿಸಿಲು ಸಾಧ್ಯ.

* ನಾಲಿಗೆಯಿಂದ ಅನನೀಯನು ಯಾವ ರೀತಿ ***ಸುಳ್ಳಾಡಿದನೋ,*** ಅದೇ ನಾಲಿಗೆಯಿಂದ ಸತ್ಯ ನುಡಿಯಲು ಸಹ ಸಾಧ್ಯವಾಗುವುದು.

ನಾಲಿಗೆಯು ಒಳ್ಳೇದಕ್ಕಾಗಿ ಒಬ್ಬನನ್ನು **ಗದರಿಸಲು** ಅಥವಾ ಸುಳ್ಳು ಮುಖಸ್ತುತಿಯ ಮೂಲಕ ನೀಚಲಾಭವನ್ನು ಪಡೆಯಲೂ ಬಳಸಲಾಗುತ್ತದೆ.

* ಜ್ಞಾನೋಕ್ತಿಗಳ ಪುಸ್ತಕದಲ್ಲಿ ಆದರ್ಶ ಸ್ತ್ರೀಯ ನುಡಿಗಳ ಬಗ್ಗೆ ವಿಶೇಷವಾಗಿ ತಿಳಿಸಿಕೊಡುತ್ತದೆ.

"ಬಾಯಿತೆರೆದು **ಜ್ಞಾನವನ್ನು** ತೋರ್ಪಡಿಸುವಳು, ಆಕೆಯ ನಾಲಿಗೆಯು ಬುದ್ಧಿಯನ್ನು ಪ್ರೀತಿಪೂರ್ವಕವಾಗಿ ಹೇಳುವುದು" (ಜ್ಞಾನೋಕ್ತಿ 31:26).

* "ಶಿಷ್ಟರ ನಾಲಿಗೆ **ಚೊಕ್ಕ ಬೆಳ್ಳಿ**" (ಜ್ಞಾನೋಕ್ತಿ 10:20).

* ನಾಲಿಗೆಯು ಒಬ್ಬನನ್ನು ರೇಗಿಸಲು ಶಕ್ತವಾದರೆ, ಅದು ಒಬ್ಬನಲ್ಲಿ ತಾಳ್ಮೆಯನ್ನು ತರಲೂ ಸಹ ಶಕ್ತವಾಗಿದೆ.

"**ಮೃದುವಾದ** ಪ್ರತ್ಯುತ್ತರವು ಸಿಟ್ಟನ್ನಾರಿಸುವುದು, ಬಿರುನುಡಿಯು ಸಿಟ್ಟನ್ನೇರಿಸುವುದು" (ಜ್ಞಾನೋಕ್ತಿ 15:1).

* ಅಂತಿಮವಾಗಿ ತಿಳಿಯುವುದೇನೆಂದರೆ– **"ಸಂತೈಸುವ ನಾಲಿಗೆ ಜೀವ ವೃಕ್ಷವು"** (ಜ್ಞಾನೋಕ್ತಿ 15:4)

ಈ ಅಧ್ಯಯನದಲ್ಲಿ ನಾವು ನಾಲಿಗೆಯನ್ನು ಹೇಗೆ ನಿಯಂತ್ರಿಸಿ ಅದನ್ನು ವಶಕ್ಕೆ ತರುವುದು ಎಂದು ಪರಿಶೀಲಿಸಿದ್ದೇವೆ. "ಜ್ಞಾನಿಗಳ ನಾಲಿಗೆಯು ತಿಳುವಳಿಕೆಯನ್ನು ಸಾರ್ಥಕ ಮಾಡುವುದು; ಜ್ಞಾನಹೀನರ ಬಾಯಿಯು ಮೂರ್ಖತನವನ್ನು ಕಕ್ಕುವುದು" (ಜ್ಞಾನೋಕ್ತಿ 15:2).

ಪ್ರಿಯರೇ! ನಾವು ಈ ನಾಲಿಗೆಯ ಮೇಲಿನ ಯುದ್ಧದಲ್ಲಿ ಒಬ್ಬಂಟಿಗರಾಗಿಲ್ಲ, ನಮ್ಮ ಜೊತೆಯಲ್ಲಿ ಯಾರಿದ್ದಾರೆ ಗೊತ್ತೇ? "ಹೃದಯದ ಸಂಕಲ್ಪವು ಮನುಷ್ಯ ವಶವು; ***ತಕ್ಕ ಉತ್ತರ ಕೊಡುವ ಶಕ್ತಿಯು ಯೆಹೋವನಿಂದಾಗುವದು***" (ಜ್ಞಾನೋಕ್ತಿ 16:1).

ಈ ಕೆಳಗಿನ ಮೂರು ಪ್ರಕರಣಗಳ ಮೂಲಕ, ನಮ್ಮ ಸಾಮಾನ್ಯ ಜೀವಿತದಲ್ಲಿ ನಾಲಿಗೆಯು ಯಾವ ರೀತಿ ಪ್ರಯೋಜಕ ಮತ್ತು ಅಪ್ರಯೋಜಕ ಎಂದು ತಿಳಿಯೋಣ.

ಮೊದಲನೆಯದಾಗಿ :– ದಿನನಿತ್ಯದ ಜೀವನದಲ್ಲಿ ನಮ್ಮ ಸಂಗಾತಿಯೊಡನೆ.
ಎರಡನೆಯದಾಗಿ :– ನಮ್ಮ ಸಭೆಯ ಸಹೋದರ/ಸಹೋದರಿರೊಂದಿಗೆ ನಮ್ಮ ಜೀವಿತ.
ಮೂರನೆಯದಾಗಿ :– ನಾವು ದುಡಿಯುತ್ತಿರುವ ಕ್ಷೇತ್ರದಲ್ಲಿ ಸಹೋದ್ಯೋಗಿ ಮಿತ್ರರು, ಅಧೀನ ಕಾರ್ಯಕರ್ತರು ಮತ್ತು ನಮ್ಮ ಮೇಲಿನ ಅಧಿಕಾರಿಯೊಂದಿಗೆ ನಮ್ಮ ಜೀವಿತ.

ಅಧ್ಯಯ ಪ್ರಕರಣ – 01

ದೌರ್ಜನ್ಯಭರಿತ ಪೋಷಕರ ನಾಲಿಗೆಯು ಮೂಲಕ ಧ್ವಂಸವಾದ ಮಕ್ಕಳ ಕುಟುಂಬ

ನೀವು ಕ್ರಿಸ್ಟಡೆಲ್ಫಿಯನ್ **(ಕ್ರೈಸ್ತಸಹೋದರರು)** ಕುಟುಂಬಕ್ಕೆ ಸೇರಿದವರಾಗಿದ್ದು, ನಿಮ್ಮ ಮನೆಗಳಲ್ಲಿ ನಿಮ್ಮ ತಂದೆತಾಯಿಗಳು ಯಾವಾಗಲೂ ಜಗಳವಾಡುವವರೂ, ಚೀರಾಡುವವರು, ತರ್ಕಮಾಡುವವರು ಆಗಿದ್ದರೆ ಈ ಘಟನೆಗಳು ನಿಮ್ಮ ಮೇಲೆ ಉಂಟುಮಾಡುವ ಪರಿಣಾಮಗಳೇನು?

ಗಂಡಹೆಂಡತಿಯು ನಡುವೆ ಜಗಳ, ವಾದ–ವಿವಾದವು ವೈವಾಹಿಕ ಜೀವನದಲ್ಲಿ ಸಾಮಾನ್ಯ. ಆದರೆ ಅದನ್ನು ಅದನ್ನು ಪ್ರಾರಂಭದಲ್ಲೇ ನಿರ್ಲಕ್ಷ ಮಾಡುವುದು ವಿಚ್ಛೇದನಕ್ಕೆ ಕಾರಣವಾಗಬಹುದು. ಒಂದು ಬೆಂಕಿಯ ಸಣ್ಣ ಕಿಡಿಯು ಯಾವ ರೀತಿ ಒಂದು ಅರಣ್ಯವನ್ನೇ ಸುಡುವುದೋ, ಅದೇರೀತಿ ಅಜಾಗರೂಕ ತಪ್ಪು ಶಬ್ದಗಳು ಒಂದು ವಿವಾಹವನ್ನೇ ಮುರಿಯಲು ಸಾಧ್ಯ. ಆದರೆ ದೇವರ ಕೃಪೆಯಿಂದ ಸತ್ಯವೇದದ ಮೂಲಕ ನಮ್ಮ ಈ ಕ್ರೂರಭರಿತ ಶರೀರದ ಈ ಅಂಗವನ್ನು ಸಂರಕ್ಷಿಸಬಹುದಾಗಿದೆ.

ಪ್ರಿಯರೇ, ನಿಮ್ಮ ಸಂಗಾತಿಯು(ಗಂಡ ಅಥವಾ ಹೆಂಡತಿ) ಒಂದು ವೇಳೆ ಪರಿತಪ್ಪಿದಲ್ಲಿ, ಗದರಿಸಿದಾಗ, ನಿಮ್ಮ ಕಾರ್ಯಗಳ ಬಗ್ಗೆ ಕೋಪಿಸಿಕೊಂಡಾಗ ಅಥವಾ ವಿನಾಕಾರಣ ಗಲಾಟೆ ಉಂಟಾದಾಗ ನೀವು ಏನು ಮಾಡಬೇಕು?

ಅ) ನಿಮ್ಮ ಸಂಗಾತಿಗೆ ಏರು ಸ್ವರವನ್ನು ಇಳಿಸಲು ಹೇಳಿ.

ಆ) ಒಮ್ಮೆ ಸುಮ್ಮನಿದ್ದು ಮತ್ತು ತದನಂತರ ವಿಚಾರಣೆ ಮಾಡಲು ತಿಳಿಸಿ.

ಇ) ನಿಮ್ಮ ಕಳವಳದ ಸ್ಥಿತಿಯನ್ನು ಸ್ಪಷ್ಟವಾಗಿ ತಿಳಿಸಲು ಪ್ರಯತ್ನಿಸಿ.

ಈ) ವಾದ ಮಾಡುವುದನ್ನು ನಿಲ್ಲಿ,ಮತ್ತು ಸಮಾಧಾನದಿಂದ ಅಂತಹ ತಪ್ಪುಗಳು ಮರುಕಳಿಸದಂತೆ ಸಲಹೆ ನೀಡಿ.

ಉ) ವಾದವನ್ನು ಅಷ್ಟರಲ್ಲೇ ಮುಗಿಸಿ ಅಲ್ಲಿಂದ ಇನ್ನೊಂದೆಡೆ ನೆಡೆದು ಹೋಗಿ, ಆಗ ವಾತಾವರಣದಲ್ಲಿ ಶಾಂತತೆಯನ್ನು ಕಾಪಾಡಲು ಅನುಕೂಲವಾಗುತ್ತದೆ.

ಕೆಲವು ಉಪಯುಕ್ತ ಸಲಹೆಗಳನ್ನು ಈ ಕೆಳಗೆ ಕಾಣಿಸಿದ್ದೇವೆ :–

* **ಕರ್ತನ ಭಯ**ವು ನಮ್ಮ ಜೀವನದಲ್ಲಿ ಸ್ಥಿರವಾಗಿರಬೇಕು. ಅದೇ ಭಯಭಕ್ತಿ ಅದಲ್ಲದಿದ್ದರೆ ಜೀವನವೇ ಅರ್ಥವಿಲ್ಲದ್ದು ಆಗುವುದು. ಕರ್ತನ ಭಯವು ಇದ್ದಲ್ಲಿ ಅದು ಬುದ್ಧಿಗೆ ಆಧಾರವಾಗಿ ದುಷ್ಟತನ, ಕಪಟತನವನ್ನು ನಿನ್ನಿಂದ ದೂರವಿಡುವುದು. ಕರ್ತನಲ್ಲಿ ಭಯವು ತಿಳುವಳಿಕೆಯ ಮೂಲಕವೇ ನಾವು ಮೇಲ್ಕಂಡ ತಾಪತ್ರಯಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದು. ಸತ್ಯವೇದದ ಹಳೇಒಡಂಬಡಿಕೆಯಲ್ಲಿನ ಯೋಬನ ಪುಸ್ತಕದಲ್ಲಿ ಈ ರೀತಿಯಾಗಿ ತಿಳುವಳಿಕೆಯನ್ನು ನೀಡಲಾಗಿದೆ–"ಆ ಮೇಲೆ ಮನುಷ್ಯರಿಗೆ–ಇಗೋ, ಕರ್ತನ ಭಯವೇ ಜ್ಞಾನವು ದುಷ್ಟತನವನ್ನು ಬಿಡುವುದೇ ವಿವೇಕವು ಎಂದು ಹೇಳಿದನು" (ಯೋಬ28:28).

* "***ಜ್ಞಾನೋಕ್ತಿಗಳು***" ಪುಸ್ತಕವು ನಮ್ಮ ಅನೇಕ ತೊಂದರೆಗಳ ಸನ್ನಿವೇಶಗಳಿಗೆ ಸೂಕ್ತ ಉತ್ತರವನ್ನು ತೋರ್ಪಡಿಸುವ ಪುಸ್ತಕವಾಗಿದೆ. ನಿನ್ನ ಸಂಗಾತಿಯ ಕೋಪವು ನಿನ್ನನ್ನು ಒಂದು ಉದ್ರೇಕಿತ ಆನೆಯಂತೆ ಕಿರುಕುಳ ಕೊಡುವುದಾದರೆ ಆಗ ನೀನು ಮಾವುತನಾಗು, ಆಗ

ನಿನ್ನ ಯಾವ ಅಂಕುಶದಿಂದ ಆ ಸಮಸ್ಯೆಯನ್ನು ಪರಿಹಾರಗೊಳಿಸುವಿ?
ಉತ್ತರ :– ''ಮೃದುವಾದ ಪ್ರತ್ಯುತ್ತರವು ಸಿಟ್ಟನ್ನಾರಿಸುವುದು, ಬಿರುನುಡಿಯು ಸಿಟ್ಟನ್ನೇರಿಸುವುದು'' (ಜ್ಞಾನೋಕ್ತಿ 15:1). ನಾವುಗಳು ಕೊಡುವಂತಹ ಸೌಮ್ಯ ಉತ್ತರವು ಸಂಗಾತಿಯ ಸಿಟ್ಟನ್ನು ಶಮನಗೊಳಿಸುವುದು.

ನಮ್ಮಗಳ ಮೆದು(ಸೌಮ್ಯ) ಮಾತುಗಳು ನಿಜವಾದ ಅಂಕುಶದಂತೆ, ಎಂತಹ ಕೋಪವನ್ನು ಶಮನಮಾಡಬಹುದಾಗಿದೆ. ನಮ್ಮ ಸಂಗಾತಿಯನ್ನು ಕುರಿತು ನಾವುಗಳು ಯಾವ ರೀತಿಯ ಕೋಮಲವಾದ ಮಾತುಗಳನ್ನು ನುಡಿಯಬಹುದು? ಕೋಪಗೊಂಡಾಗ ಏನು ಮಾಡಬೇಕು? ಹೇಗೆ ವರ್ತಿಸಬೇಕು? ಎನ್ನುವುದನ್ನು ತಿಳೀಯೋಣ.

ಅ) ನಿನ್ನ ಬಾಯಿಮುಚ್ಚು ಎಂದು ಸಂಗಾತಿಯನ್ನು ಪಕ್ಕನೆ ಗದರಿಸುವುದು ಹೀನಕರ ವಿಷಯ. ಏಕಂದರೆ ತಪ್ಪಾದ ಶಬ್ದಗಳು ಮನಸ್ಸು ಒಡೆಯಲು ತೀವ್ರ ಕಾರಣವಾಗುತ್ತವೆ. ಯಾಕಂದರೆ ''**ಬಿರುನುಡಿಯು ಸಿಟ್ಟನ್ನೇರಿಸುವುದು**''.

ಆ) ನಿಜವಾಗಿಯೂ ನಿಮ್ಮ ಸಂಗಾತಿಯು ಉದ್ರೇಕಿತರಾಗಲು ಕಾರಣ – ನೀವು ಅವರಿಗೆ ಅವರ ಕಾರ್ಯಗಳನ್ನು ನೆನಪಿಸಲು ವಿಫಲರಾಗಿದ್ದೀರಿ ಎಂದು ಭಾವಿಸಿದರೆ, ನಾವು ಈ ಸ್ಥಿತಿಗೆ ಕಾರಣರಲ್ಲ ಎಂದು ನೆಪಹೇಳಬೇಡಿ. ಹಿಂದಿನ ಕಾರ್ಯಗಳನ್ನು ಕುರಿತು ಟೀಕೆ ಮಾಡುವುದನ್ನು ನಿಲ್ಲಿಸಿ, ಅವರ ಹಿಂದಿನ ತಪ್ಪುಗಳನ್ನು ಪದೇಪದೇ ನೆನಪು ಮಾಡಿ ನಾನೇ ಸರಿ ಎಂದು ಪ್ರತಿವಾದ ಮಾಡಲು ಹೋಗಬೇಡಿ. ದೊಡ್ಡದಾದ ಸ್ವರದಲ್ಲಿ ಚೀರುವುದೂ ಕೂಡ ಮಕ್ಕಳ ನಡುವೆ ತಪ್ಪಾದ ರೀತಿಯದಾಗುತ್ತದೆ. ನಿಮ್ಮ ಸಂಗಾತಿಯೊಡನೆ ಸೌಮ್ಯಭಾವದಿಂದ, ಮೃದುವಾದ ನುಡಿಗಳಲ್ಲಿ ಅರ್ಥಗರ್ಭಿತವಾಗಿ ಆರೋಗ್ಯಕರ ಚರ್ಚೆಮಾಡಿ, ನಿಮ್ಮ ಸಮಯವನ್ನು ಅಮೂಲ್ಯ ರೀತಿಯಲ್ಲಿ ಬಳಕೆಮಾಡಿಕೊಳ್ಳಿ.

ಇ) ಕೋಪಿಷ್ಟರಾಗಿರುವವರೆದುರು ನಿಮ್ಮ ತಪ್ಪಿಲ್ಲದಿದ್ದರೂ, **ಶಾಂತತೆಯನ್ನು** ಕಾಪಾಡಿ, ಆ ವೇಳೆಯಲ್ಲಿ ನೀವು ಸಂಕಟಪಡಬಹುದು. ಏಕಂದರೆ ಒಂದು ಕೆರಳಿದ ಸಿಂಹದ ಎದುರು ಕಾರಣ ಹುಡುಕುವ ಸಮಯ ಅದಲ್ಲ. ಆದರೆ ಸಿಂಹ ಶಾಂತವಾಗಿದ್ದಾಗ ಕಾರಣ ಹುಡುಕ ಬಹುದಲ್ಲವೇ? ಹಾಗಾಗಿ ಬಿಕ್ಕಟ್ಟಿನ ಸ್ಥಿತಿಯಲ್ಲಿ ಕೋಮಲತೆ ಹಾಗೂ ಸಭ್ಯತೆ ಕಾಪಾಡುವುದೇ

ಲೇಸು. ಆನಂತರ ಅವರ ಚಿಂತೆ, ಕೊರಗುವಿಕೆಯ ಮೇಲೆ ನಿಮ್ಮ ಮಮತೆಯ ಮೂಲಕ ಅವರಿಗೆ ಸಮಾಧಾನ ಪಡಿಸುವ ವಿಚಾರಗಳನ್ನು ವ್ಯಕ್ತಪಡಿಸಿ.

ಈ) **ನಮ್ರತೆ, ತ್ಯಾಗ ಮತ್ತು ತಾಳ್ಮೆ :–** ನಿಮ್ಮ ಸಂಗಾತಿಯ ಸದ್ಯದ ಅವಶ್ಯಕತೆಯನ್ನು ಅರ್ಥಮಾಡಿಕೊಳ್ಳಿ. ನಿಮ್ಮದೇ ಸರಿಯಾಗಿದ್ದರೂ ಶಾಂತತೆಯನ್ನು ಕಾಪಾಡಿ, ತಾಳ್ಮೆಯು ಅತ್ಯಾವಶ್ಯಕ. ನೆನಪಿರಲಿ ಯೇಸುಕ್ರಿಸ್ತನಿಗೆ ಜನರು ಹೇರಳವಾಗಿ ಬೈದಿದ್ದರೂ ಯಾವರೀತಿ ಆತನು ಉತ್ತರ ಕೊಡದೆ ಶಾಂತತೆಯನ್ನು ಕಾಪಾಡಿದ್ದನು! ''ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ'' (1ಪೇತ್ರ 2:23).

ಅದೇ ರೀತಿ ಆತ್ಮಸಂಯಮದೊಂದಿಗೆ ಹತೋಟಿಯಲ್ಲಿರಿ, ಅದು ಬಿಟ್ಟು ಪ್ರತಿವಾದನೆ ಮತ್ತು ತನ್ನ ಬಣ್ಣಿಸುವಿಕೆಯು ಪಾಪಕ್ಕೆ ಕಾರಣ. ಹಾಗಾಗಿ ಬಹಳ ಕೋಮಲತೆಯೊಂದಿಗೆ ವ್ಯವಹರಿಸು. ಕೋಪ ನಿವಾರಣೆಯಾಗುವತನಕ ಒಂದೇ ಸಮನೆ ಕೋಪ ಇದ್ದಾಗ್ಯೂ ವಿನಯತೆ ಮತ್ತು ತಾಳ್ಮೆಗೆ ಪ್ರಧಾನತೆ ಇರಲಿ.

ನೆನಪಿರಲಿ ತಾಳ್ಮೆಯ ಮೂಲಕ ಒಬ್ಬ ದಣಿಯ ಮನ ಒಪ್ಪುವಂತೆ ಮಾಡಲು ಸಾಧ್ಯ ಮತ್ತು ನಯವಾದ ಹಾಗೂ ಮೆದುವಾದ ನಾಲಿಗೆಯು ಎಲುಬುಗಳನ್ನು ತುಂಡುಮಾಡಲು ಶಕ್ತವಾಗಿದೆ. ಈ ವಿಷಯವಾಗಿ ಜ್ಞಾನೋಕ್ತಿಗಳಲ್ಲಿ ಈ ರೀತಿಯಾಗಿ ತಿಳಿಸಲ್ಪಟ್ಟಿದೆ– ''ದೀರ್ಘಶಾಂತಿಯಿಂದ ಪ್ರಭುವನ್ನು ಸಮ್ಮತಿಪಡಿಸಬಹುದು; ಮೃದುವಚನವು ಎಲುಬನ್ನು ಮುರಿಯುವುದು'' (ಜ್ಞಾನೋಕ್ತಿಗಳು 25:15).

ಉ) ಸಂಭಾಷಣೆಗೆ ಮತ್ತೆ ಅವಕಾಶ ಕೊಡಿ, ಒಮ್ಮೆ ಆ ಬಿರುಗಾಳಿ ದಾಟಿಹೋದ ಮೇಲೆ ಆ ವಿಷಯಕ್ಕೆ ಸೂಕ್ತ ಉಪಾಯ ಕಂಡುಕೊಳ್ಳಲು ಚರ್ಚೆಗೆ ಇಳಿಯಬಹುದು. ಆಗಿ ಹೋದ ವಿಷಯಗಳೆಡೆ ಅಸಡ್ಡೆ ಮಾಡುವುದರಿಂದ ಉಪಾಯ ಸಿಗಲಾರದು. ಒಂದು ಒಳ್ಳೆಯ ಸಂಬಂಧವನ್ನು ಬೆಳೆಸಲು ಸಾಕಷ್ಟು ಉಪಾಯಗಳ ಅವಶ್ಯಕತೆ ಇದೆ. ಈ ರೀತಿಯ ಪ್ರೀತಿಯ ಉರಿಯುವಿಕೆಗೆ ಅವಶ್ಯ ಪ್ರಾಮುಖ್ಯತೆ ಇದೆ.

ಸಿಟ್ಟನ್ನು, ಅಸಮಾಧಾನವನ್ನು, ಅತೃಪ್ತಿಯನ್ನು ಆರಿಸುವುದರಿಂದ ಸಂಬಧದಲ್ಲಿನ ಉಷ್ಣಾಂಶ ಕಡಿಮೆಯಾಗಿ ಶೀತಲತೆ ಹೆಚ್ಚುವುದು. ಶಾಂತ, ಕೋಮಲ ಶಬ್ದಗಳುಳ್ಳ ಸಂಭಾಷಣೆ ಇರಲಿ. ಆಗ ಇಂತಹ ಪರಿಸ್ಥಿತಿಯನ್ನೆದುರಿಸಲು ಕೈಕೊಳ್ಳಬಹುದಾದ ಉಪಾಯವು ಖಂಡಿತ ದೊರಕುವುದು. ಹಾಗಾಗಿ ಎಚ್ಚರವಾಗಿರು, ಒಪ್ಪಿಕೊ, ಪಾಪನಿವೇದನೆ ಬೇಡು. ದೇವರಲ್ಲಿ ನಿನ್ನ ಲಘು ಜೀವಿತವನ್ನು ಆಶೀರ್ವದಿಸಲು ವಿನಂತಿಸು. ನೀವಿಬ್ಬರೂ ಕೂಡಿ ಇಂತಹ ಬಿರುಗಾಳಿಗಳನ್ನೆದುರಿಸಲು, ಪ್ರೇಮದ ಉರಿಯುವ ಬೆಂಕಿಯನ್ನಿರಿಸಿಕೊಳ್ಳಿರಿ. ನಿಮ್ಮ ಲಘು ಜೀವಿತ ಸುಂದರಮಯವಾಗಿರಲಿ.

ಪತಿಪತ್ನಿಯರು ನಾಲಿಗೆಯನ್ನು ನಿಯಂತ್ರಿಸುವ ಬಂಗಾರದಂತಹ ನಿಯಮಗಳು :–

*** ಪುರುಷರೇ ತ್ಯಾಗಮಯವಾಗಿರಿ :**

"ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು" (ಎಫೆಸ 5:25–26).

*** ಸ್ತ್ರೀಯರೇ ಅಧೀನರಾಗಿರಿ :**

"ಸ್ತ್ರೀಯರೇ ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ಗಂಡಂದಿರಿಗೆ ಅಧೀನರಾಗಿರಿ" (ಎಫೆಸ 5:22).

*** ತಾಳ್ಮೆ ಮತ್ತು ಕ್ಷಮಾಗುಣ ಇರಲಿ :**

"ಮತ್ತೊಬ್ಬರ ಮೇಲೆ ತಪ್ಪುಹೊರಿಸುವುದಕ್ಕೆ ಕಾರಣವಿದ್ದರೂ ತಪ್ಪುಹೊರಿಸದೆ ಒಬ್ಬರಿಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದನಲ್ಲಾ" (ಕೊಲೊ 3:13).

ಅಧ್ಯಯ ಪ್ರಕರಣ – 02

ಕೋಪಿಸಿಕೊಂಡ ಸಹೋದರ



ಸಭೆಯಲ್ಲಿ ಕಾರ್ಯಕ್ರಮಗಳನ್ನು ನಿರ್ವಹಣೆ ಮಾಡುವ ಸಹೋದರನು ಚತುರನಾಗಿದ್ದು ಗರಿಷ್ಠ ಮಾತಿನವನಾಗಿರುತ್ತಾನೆ. ಆದರೆ ಒಂದು ಉಪದೇಶದ ಸಭೆಯಲ್ಲಿರುವಾಗ ಆತನು ತನ್ನ ಸಂಯಮವನ್ನು ಕಳೆದುಕೊಂಡು ತನ್ನದೇ ವಿಚಾರಗಳನ್ನು ಮುಂದೊಡ್ಡಿ, ವಾದ ಪ್ರತಿವಾದಕ್ಕೆ ಕಾರಣನಾಗುತ್ತಾನೆ ಮತ್ತು ಕೋಪಗೊಂಡು ವರ್ತಿಸುತ್ತಾನೆ. ಅಂತಹ ಸಂದರ್ಭದಲ್ಲಿ ನಾವು ಏನು ಮಾಡಬೇಕು?

ಅ) ನಿಮ್ಮ ಸಹೋದರನಿಗೆ ಮೌನವಾಗಿರಲು ತಿಳಿಸಿ.

ಆ) ಆ ಸಭೆಯಿಂದ ತಕ್ಷಣ ಹೊರಗೆ ನಡೆಯಿರಿ.

ಇ) ಆ ಸಹೋದರನಿಗೆ ಸಂಯಮವನ್ನು ಕಳಕೊಳ್ಳುವುದು ಸರಿಯಲ್ಲ ಎಂದು ನೆನಪು ಮಾಡಿರಿ.

ಈ) ಸರಿಯಾದ ನಿಮ್ಮ ವಿಚಾರವನ್ನು ಆ ಸಹೋದರನಿಗೆ ಅರ್ಥ ಮಾಡಿಸಲು ಪ್ರಯತ್ನಿಸಿ.

ಉ) ಶಾಂತತೆಯಿಂದ ಅವಲೋಕಿಸುವುದು, ಆ ಸಂದರ್ಭಕ್ಕೆ ಸೂಕ್ತ ಉಪಾಯ.

ಊ) ಸಭೆಯನ್ನು ತತ್ಕಾಲಕ್ಕೆ ನಿಲ್ಲಿಸಿ, ನಂತರ ಸ್ವಲ್ಪ ಸಮಯದ ನಂತರ ಮುಂದುವರೆಸುವುದು.

ಒಮ್ಮೆಮ್ಮೆ ಸಭೆಯು ಒಂದು ಮೃಗಾಲಯವಾಗಿ ಪರಿವರ್ತನೆಯಾದಾಗ, ನಾವು ಚಿರತೆ, ಸಿಂಹ, ಹುಲಿಗಳ ನಡುವಿನಲ್ಲಿದ್ದ ಹಾಗೆ ನಮಗೆ ತೋರಬಹುದು. ಆ ಸಂದರ್ಭದಲ್ಲಿ ನಾವು ಏನು ಮಾಡಬೇಕು? ಉತ್ತರವನ್ನು ಜ್ಞಾನೋಕ್ತಿಗಳ ಪುಸ್ತಕದಲ್ಲಿ ತಿಳಿಸಿದೆ.

ಸರಿಯಾದ ಕಾರಣವಿಲ್ಲದೆ ನಿನ್ನ ಸ್ವಭಾವವನ್ನು ಉದ್ರೇಕಿಸಬೇಡ. "ಕೋಪಿಷ್ಟನು ವ್ಯಾಜ್ಯವನ್ನೆಬ್ಬಿಸುವನು; ದೀರ್ಘಶಾಂತನು ಜಗಳವನ್ನು ಶಮನಪಡಿಸುವನು" (ಜ್ಞಾನೋಕ್ತಿಗಳು 15:18).

*** ಇನ್ನೊಬ್ಬನ ತಪ್ಪನ್ನು ಎತ್ತಲಿಕ್ಕೆ ಅವಸರ ಬೇಡ**

"ಮನುಷ್ಯನ ವಿವೇಕವು ಅವನ ಸಿಟ್ಟಿಗೆ ಅಡ್ಡಿ ತರುವುದು; ಪರರ ದೋಷವನ್ನೇ ಲಕ್ಷಿಸದಿರುವುದು ಅವನಿಗೆ ಭೂಷಣ" (ಜ್ಞಾನೋಕ್ತಿಗಳು 19:11).

* ಆಯಾ ಸಂದರ್ಭದಲ್ಲಿ ಯೋಗ್ಯವಾದ ಮಾತುಗಳನ್ನೇ ಹುಡುಕಿ ಮಾತನಾಡಿ. ಹೌದು ಈ ರೀತಿಯ ಶಬ್ದಗಳು ಆಳವಾದ ಧ್ಯಾನದ ಮತ್ತು ಜ್ಞಾನದ ಮೂಲಕ ಬರುವುವು.

"ಸಮಾಲೋಚಿತವಾದ ಮಾತುಗಳು ಬೆಳ್ಳಿಯ ನಕಾಶೆಯಲ್ಲಿ ಖಚಿತವಾದ ಬಂಗಾರದ ಹಣ್ಣುಗಳಿಗೆ ಸಮಾನ" (ಜ್ಞಾನೋಕ್ತಿಗಳು 25:11).

ತಕ್ಕ ಉತ್ತರವನ್ನು ಕೊಡುವವನಿಗೆ ಎಷ್ಟೋ ಉಲ್ಲಸ ಸಿಗುವುದು, ಸಮಾಲೋಚಿತವಾದ ನುಡುಗಳಿಂದ ಎಷ್ಟೋ ಇಂಪಾಗುವುದು.

* ಶಾಂತಿಯುತ ವಾತಾವರಣ ಕೈಗೂಡಲು ಪ್ರಯತ್ನಿಸುವಾಗ ಶಾಂತತೆ ಕಾಪಾಡು ಅದು ಚಿನ್ನದಂತೆ, ಮತ್ತು ಉಚಿತವಾದ ಸಮಯದಲ್ಲೇ ಬಾಯನ್ನು ತೆರೆಯುತ್ತಿರು.

"ಮಾತಾಳಿಗೆ ಪಾಪ ತಪ್ಪದು. ಮೌನಿಯು ಮತಿವಂತ, ಶಿಷ್ಟರ ನಾಲಿಗೆ ಬೊಕ್ಕಬೆಳ್ಳಿ" (ಜ್ಞಾನೋಕ್ತಿಗಳು 10:19).

"ದುಡುಕಿ ಮಾತನಾಡುವವನನ್ನು ನೋಡು, ಅಂಥವನಿಗಿಂತಲೂ ಮೂಢನ ವಿಷಯದಲ್ಲಿ ಹೆಚ್ಚು ನಿರೀಕ್ಷೆಯನ್ನಿಡಬಹುದು" (ಜ್ಞಾನೋಕ್ತಿಗಳು 29:20).

*** ನೀನು ಮಾತನಾಡುವ ಸಂದರ್ಭ ಬರುವಾಗ ನಿನ್ನ ಮಾತುಗಳು ಕೇಳುಗರ ಕಿವಿಗಳಿಗೆ ಸಮ್ಮತವಾಗಿ, ಮಧುರವಾಗಿರಲಿ. ಲೋಪದೋಷಗಳನ್ನು ಪ್ರೀತಿ ಮಮತೆಯೊಂದಿಗೆ ನಿವಾರಿಸುವಿಕೆಯಾಗಲಿ.**

''ಸವಿನುಡಿಯು ಜೇನುಕೊಡ, ಅದು ಆತ್ಮಕ್ಕೆ ಸಿಹಿ, ಮತ್ತು ಎಲುಬುಗಳಿಗೆ ಕ್ಷೇಮ'' (ಜ್ಞಾನೋಕ್ತಿಗಳು 16:24).

*** ನಿನ್ನ ಮಾತುಗಳು ದೈವೀಕ ಜ್ಞಾನದೊಂದಿಗೆ ಹೊರಸೂಸಲಿ. ನಿನ್ನ ಹೇಳಿಕೆಗಳು ಜನಗಳ ದೃಷ್ಟಿಯಲ್ಲಿ ಜ್ಞಾನದಿಂದ ತುಂಬಿದವುಗಳಾಗಿರಲಿ.**

''ಶಿಷ್ಟನ ಬಾಯಲ್ಲಿ ಜ್ಞಾನವು ಮೊಳೆಯುವುದು'' (ಜ್ಞೋನೋಕ್ತಿ 10:31).

* **ಇವೂ ಜ್ಞಾಪಕದಲ್ಲಿರಲಿ–** ಸಿಹಿ ನುಡಿಗಳೆಂದರೆ ಮುಖಸ್ತುತಿ ಅಥವಾ ಸುಳ್ಳು ಮಿಶ್ರಿತವಾದದ್ದು ಆಗಿರಬಾರದು. ಇವೆರಡೂ ಕುತಂತ್ರವುಳ್ಳವುಗಳಾಗಿದ್ದು ದೇವರಿಗೆ ಅಸಹ್ಯವಾದವುಗಳಾಗಿವೆ.

''ಯೆಹೋವನು ಹಗೆಮಾಡುವ ವಸ್ತುಗಳು ಆರು ಇವೆ. ಹೌದು ಏಳು ಆತನಿಗೆ ಅಸಹ್ಯಗಳಾಗಿ ತೋರುತ್ತವೆ. ಯಾವವೆಂದರೆ, ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ, ನಿರ್ದೋಷ ರಕ್ತವನ್ನು ಸುರಿಸುವ ಕೈ, ದುರಾಲೋಚನೆಗಳನ್ನು ಕಲ್ಪಿಸುವ ಹೃದಯ, ಕೇಡು ಮಾಡಲು ತ್ವರೆಪಡುವ ಕಾಲು, ಅಸತ್ಯವಾಡುವ ಸುಳ್ಳುಸಾಕ್ಷಿ, ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು, ಈ ಏಳೇ'' (ಜ್ಞಾನೋಕ್ತಿಗಳು 6:16–19).

''ಮುಖಸ್ತುತಿ ಮಾಡುವುವನಿಗಿಂತಲೂ, ಗದರಿಸುವವನು ಬಳಿಕ ಹೆಚ್ಚು ದಯಾಪಾತ್ರನಾಗುವನು'' (ಜ್ಞಾನೋಕ್ತಿಗಳು 28:3).

ಮೇಲೆ ತಿಳಿಸಿರುವ ಎಲ್ಲಾ ವಿಷಯಗಳಲ್ಲಿನ ಸಾರಾಂಶವೆಂದರೆ ನಾವು ಜ್ಞಾನದಿಂದ ಕೂಡಿದವರಾಗಿ ಸರಿಯಾದ ಶಬ್ದಗಳನ್ನು ಉಪಯೋಗಿಸುವ ಅನುಭವನ್ನು ಕಲಿಯುವುದೇ ನಮ್ಮ ಜೀವನದಲ್ಲಿ ಬಹುಮುಖ್ಯವಾದುದಾಗಿದೆ. ಏಕಂದರೆ,

''ನಿಮ್ಮ ಸಂಭಾಷಣೆಯು ಯಾವಾಗಲೂ ಇಂಪಾಗಿಯೂ ರಸವತ್ತಾಗಿಯೂ ಇರಲಿ. ಹೀಗೆ ನೀವು ಯಾರಾರಿಗೆ ಯಾವಯಾವ ರೀತಿಯಲ್ಲಿ ಉತ್ತರ ಹೇಳಬೇಕೋ ಅದನ್ನು ತಿಳಿದುಕೊಳ್ಳುವಿರಿ'' (ಕೊಲೊಸ್ಸೆಯವರಿಗೆ 4:6).

(ಮುಂದುವರೆಯುವುದು).....

ವಸ್ತ್ರಕ್ಕೆ ತ್ಯಾಪೆ ಹಚ್ಚುವುದು ಮತ್ತು ಬುದ್ದಲಿಗಳು

ಯೇಸುಕ್ರಿಸ್ತನ ಸಾಮ್ಯಗಳು

(ಮತ್ತಾಯ 9:16–17, ಮಾರ್ಕ 2:21–22, ಲೂಕ 5:36–39)

ಯೇಸುಕ್ರಿಸ್ತ ತನ್ನ ಸೇವಾ ಅವಧಿಯಲ್ಲಿ ದೇವರ ರಾಜ್ಯದ ಬಗ್ಗೆ ಅನೇಕ ಸಾಮ್ಯಗಳನ್ನು ಹೇಳಿದ್ದಾನೆ. ಆತನ ಬೋಧನೆಯು ಅದ್ವಿತೀಯವಾದವುಗಳಾಗಿವೆ. ಈ ಲೋಕದಲ್ಲಿ ಯಾರು ಮಾಡಲಾಗದ ಬೋಧನೆ ಮತ್ತು ವಿಶೇಷ ಕಾರ್ಯಗಳನ್ನು ಮಾಡಿರುತ್ತಾನೆ. ಉಪವಾಸವು ಬಾಹ್ಯಾಚಾರವಾಗಿದೆ ಇದರಿಂದ ಏನೂ ಪ್ರಯೋಜನವಿಲ್ಲ. ಲೋಕದ ಜನರು ಹಿರಿಯರಿಂದ ಬಂದ ಸಂಪ್ರದಾಯಗಳನ್ನು ಆಚರಿಸುವಲ್ಲಿ ವಿಶೇಷವಾದ ಆಸಕ್ತಿಯನ್ನು ಹೊಂದಿದ್ದು ನಿಜವಾದ ಪರಿವರ್ತನೆಯಾಗಿ ದೇವರ ವಾಕ್ಯವನ್ನು ಸಿದ್ಧಮನಸ್ಸಿನಿಂದ ಸ್ವೀಕರಿಸಿ ಅದನ್ನು ನಮ್ಮ ದೈನಂದಿನ ಜೀವಿತದಲ್ಲಿ ಅನುಷ್ಠಾನಕ್ಕೆ ತರಬೇಕು.

ಯೇಸು ಸಾಮ್ಯದಲ್ಲಿ ಹಳೇ ವಸ್ತ್ರಕ್ಕೆ ತ್ಯಾಪೆ ಹಚ್ಚುವುದರ ಬಗ್ಗೆ ತಿಳಿಸಿರುವುದೇನೆಂದರೆ ಯೆಹೂದ್ಯರು/ಇಸ್ರಾಯೇಲ್ ಜನರ ಸಂಪ್ರದಾಯದ ಆಚರಣೆಯನ್ನು ಹೇಳುವಾಗ ಇದರಿಂದ ಯಾವ ಪ್ರಯೋಜನವಿಲ್ಲ, ಮತ್ತು ಅನ್ಯಜನರು ಸಹ ಆಚರಿಸುವ ಸಂಪ್ರದಾಯವು ಸಹ ನಿಷ್ಪ್ರಯೋಜನವಾಗಿದೆ. ಯಾಕಂದರೆ ದೇವರ ಚಿತ್ತಕ್ಕೆ ವಿರೋಧವಾಗಿ ನಡೆಯುವುದರಿಂದ ನಮಗೆ ದೇವರ ಆಶೀರ್ವಾದದ ಬದಲು ಶಾಪವು ದೊರೆಯುತ್ತದೆ. ಇದರ ಫಲ ಮರಣ. ಯೇಸುವಿನ ಶಿಷ್ಯರು ಯೆಹೂದ್ಯರಿಂದ ಬಂದ ಸಂಪ್ರದಾಯವನ್ನು ಆಚರಣೆ ಮಾಡದೆ ಇರುವಾಗ ಈ ವಿಷಯವಾಗಿ ಯೇಸುವಿನ ಹತ್ತಿರ ಚರ್ಚೆಯನ್ನು ಮಾಡುತ್ತಾರೆ ಮತ್ತು ಆಕ್ಷೇಪಿಸುತ್ತಾರೆ. ಯೇಸು ಕ್ರಿಸ್ತನು ಈ ಲೋಕಕ್ಕೆ ಮೊದಲನೆಯಸಾರಿ ಬಂದ ಉದ್ದೇಶವನ್ನು ಆ ಜನಾಂಗದವರು ಸರಿಯಾಗಿ ತಿಳುಕೊಳ್ಳಲಿಲ್ಲ. ಅವರ ಮಧ್ಯದಲ್ಲಿ ದೇವರ ರಾಜ್ಯದ ವಿಷಯವಾಗಿ ಬೋಧನೆ ಮಾಡುವಾಗ ಅವರಿಗೆ ಅರ್ಥವಾಗಲಿಲ್ಲ. ಮತ್ತಾಯ 13:11ರಲ್ಲಿ ಯೇಸು ಶಿಷ್ಯರ ಸಂಗಡ ಮಾತಾಡುವಾಗ –''ಪರಲೋಕ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೆ ಕೊಟ್ಟಿದೆ, ಅವರಿಗೆ ಕೊಟ್ಟಿಲ್ಲ'' ಎಂದು ತಿಳಿಸುತ್ತಾನೆ. ಈ ಸಾಮ್ಯದ ಅರ್ಥವನ್ನು ಸರಿಯಾಗಿ ಪರಿಶೋಧಿಸಿ ತಿಳಿಯುವುದಾದರೆ ಯೇಸು ಈ ವಿಷಯದಲ್ಲಿ ಸ್ಪಷ್ಟವಾಗಿ ಹೇಳಿರುತ್ತಾನೆ–''ಯಾರು ಹೊಸ ಬಟ್ಟೆಯ ತುಂಡನ್ನು ಹಳೆಯ ವಸ್ತ್ರಕ್ಕೆ ತ್ಯಾಪೆ ಹಚ್ಚುವುದಿಲ್ಲ, ಹಚ್ಚಿದರೆ ಆ ತ್ಯಾಪೆಯು ವಸ್ತ್ರ ಹಿಂಜುವುದರಿಂದ ಹರಕು ಹೆಚ್ಚಾಗುವುದು'' ಮತ್ತು ಲೂಕ 5:36ರಲ್ಲಿ ಹೀಗೆ ತಿಳಿಸಿದೆ– ''ಯಾರು ಹೊಸವಸ್ತ್ರದಿಂದ ಒಂದು ತುಂಡನ್ನು ಹರಕೊಂಡು ಹಳೇವಸ್ತ್ರಕ್ಕೆ ತ್ಯಾಪೆ ಹಚ್ಚುವುದಿಲ್ಲ.'' ಹಚ್ಚಿದರೆ ಆ ಹೊಸದರಿಂದ ಹರಿದು ಹಚ್ಚಿದ ತ್ಯಾಪೆಯು ಹಳೆಯದಕ್ಕೆ ಒಪ್ಪುವುದೂ ಇಲ್ಲ, ಒಂದುವೇಳೆ ಹಾಗೆ ಮಾಡಿದರೆ ವ್ಯರ್ಥವಾಗುತ್ತದೆ ಮತ್ತು ಹೊಂದಿಕೆಯಾಗುವುದಿಲ್ಲ. ಯಾಕಂದರೆ ಹೊಸ ಅಂಗಿಯನ್ನು ಯಾರು ಕೆಡಿಸಿಕೊಳ್ಳಲು ಇಷ್ಟಪಡುವುದಿಲ್ಲ, ಹಾಗೆ ಯಾರೂ ಮಾಡುವುದಿಲ್ಲ. ಈ ಸಾಮ್ಯದಲ್ಲಿ ವರ್ಣಿತವಾಗಿರುವಂತೆ ಯೇಸುಕ್ರಿಸ್ತನು ತ್ಯಾಪೆ ಹಚ್ಚುವ ಕೆಲಸವನ್ನು ಮಾಡುವುದಿಲ್ಲ. ಯಾಕಂದರೆ ದೇವರರಾಜ್ಯದ

ನೂತನ ಸಿದ್ಧಾಂತಗಳನ್ನು ಹಳೇ ಸಂಪ್ರದಾಯ, ಆಚಾರ, ಪದ್ಧತಿ ಮತ್ತು ನಿಯಮಗಳಿಗೆ ಸಂಬಂಧಿಸಿ ಕಲಬೆರಕೆ ಮಾಡುವವನಲ್ಲ. ಈ ಸಂದರ್ಭದಲ್ಲಿ ಯೋಹಾನನ ಮತ್ತು ಆತನ ಶಿಷ್ಯರ ವಿಚಾರವನ್ನು ಮತ್ತು ಫರಿಸಾಯರ ಸಂಪ್ರದಾಯಗಳಿಗೆ ತಮ್ಮನ್ನು ಒಳಪಡಿಸಿಕೊಂಡು ದೇವರರಾಜ್ಯದ ನೂತನ ಪ್ರೇರಣೆಯನ್ನು ಬಲಹೀನವಾದದ್ದಾನ್ನಾಗಿ ಮಾರ್ಪಡಿಸಿಕೊಳ್ಳುತ್ತಿದ್ದರು. ಆದಕಾರಣ ಯೇಸು ಅವರಿಗೆ ಸರಿಯಾದ ತಿಳಿವಳಿಕೆಯನ್ನು ಕೊಡುತ್ತಾನೆ.

ಮತ್ತಾಯ 5:15ರಲ್ಲಿ "ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವುದಿಲ್ಲ, ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ಆಗ ಅದು ಮನೆಯವರೆಲ್ಲರಿಗೂ ಬೆಳಕುಕೊಡುವುದು" ಎಂದು ತಿಳುವಳಿಕೆ ಕೊಡುತ್ತಾನೆ. ಆದರೆ ಆ ಜನಾಂಗದವರು ದೇವರರಾಜ್ಯದ ನೂತನ ಬೋಧನೆಯನ್ನು ನಿರರ್ಥಕ ಮಾಡಿಕೊಳ್ಳುವವರಾಗಿದ್ದರು.

ಯೇಸುಕ್ರಿಸ್ತನು ಹಳೆಯ ವಸ್ತ್ರಕ್ಕೆ ಸಮಾನವಾಗಿರುವ ಪಾಪಿಯ ಗುಣವನ್ನು ತನ್ನ ಬೋಧನೆಯೆಂಬ ಹೊಸಬಟ್ಟೆಯ ತುಂಡಿನಿಂದ ತ್ಯಾಪೆ ಹಚ್ಚಿ ಸರಿಪಡಿಸುವವನಲ್ಲ. ಸುವಾರ್ತೆಯ ಕೆಲಸವು ತ್ಯಾಪೆ ಹಚ್ಚುವುದಲ್ಲ, ಕ್ರಿಸ್ತನು ತುಂಡುಗಳನ್ನು ಜೋಡಿಸಿ ಹೊಲಿಯುವವನಲ್ಲ, ಅವನು ಸಂಪೂರ್ಣವಾದ ಹೊಸಬಟ್ಟೆಯನ್ನು ನೇಯುತ್ತಾನೆ. ಹೊಸಬಟ್ಟೆಯು ಆತನ ಬೋಧನೆಯನ್ನು ತಿಳಿಸುತ್ತದೆ. ಹೃದಯದಲ್ಲಿ ತುಂಬಿರುವ ಅಶುದ್ಧತೆಯಿಂದ ಇರುವಾಗ ಹೊರಗಣ ಆಚಾರ ಮತ್ತು ತಿದ್ದುಪಾಟುಗಳಾಗಲಿ ನಮ್ಮಲ್ಲಿ ಶುದ್ಧತ್ವವನ್ನು ಉಂಟುಮಾಡಲಾರವು. ಹೃದಯದ ಬದಲಾವಣೆಯೇ ಅಗತ್ಯವಾಗಿದೆ.

ಬುದ್ದಲಿಗಳು ಮೇಕೆಯ ಚರ್ಮದಿಂದ ಮಾಡಿದವವುಗಳಾಗಿವೆ. ಅಂಥಾ ಬುದ್ದಲಿಗಳನ್ನು ಯಾವಾಗಲೂ ಉಪಯೋಗಿಸುವುದರಿಂದ ಅವುಗಳ ಬಲವು ಕ್ಷೀಣಿಸುತ್ತಾ ಬರುವುದು. ಹೀಗೆ ಕ್ಷೀಣಿಸಿ ಜೀರ್ಣವಾಗುತ್ತಿರುವ ಬುದ್ದಲಿಗಳಲ್ಲಿ ಹೊಸದ್ರಾಕ್ಷಾರಸವನ್ನು ಹಾಕಿಡುವುದಾದರೆ ಆ ಹೊಸ ದ್ರಾಕ್ಷಾರಸದ ಬಲವನ್ನು ಎದುರಿಸಲು ಸಾಧ್ಯವಿಲ್ಲ. ಯಾಕಂದರೆ ಹೊಸ ದ್ರಾಕ್ಷಾರಸವು ಯಾವಾಗಲೂ ಉಕ್ಕುತ್ತಿರುವುದಾದ ಒಂದು ವಿಧವಾದ ವಾಯು ಪದಾರ್ಥವು(ಗ್ಯಾಸ್) ಉತ್ಪತ್ತಿಯಾಗುತ್ತಲೇ ಇರುವುದು. ಇದನ್ನು ಹಾಕಿರುವ ಚರ್ಮದ ಬುದ್ದಲಿಗಳು ಬಲವುಳ್ಳವುಗಳಾಗಿರುಬೇಕು ಅಥವಾ ತಡೆಯುವಂಥಹ ಸಾಮರ್ಥ್ಯವಿರಬೇಕು. ಹಳೇದಾದ ಬಲಹೀನವಾದ ಇಲ್ಲವೇ ಜೀರ್ಣವಾಗಿರುವ ಬುದ್ದಲಿಗಳು ವಾಯು ಪದಾರ್ಥವನ್ನು ಅಡಗಿಸಿಕೊಳ್ಳಲು ಬಲವಿಲ್ಲದವುಗಳಾದರೆ ಬುದ್ದಲಿಗಳು ಒಡೆದು ದ್ರಾಕ್ಷಾರಸವು ಚೆಲ್ಲಿಹೋಗಿ ವ್ಯರ್ಥವಾಗುವುದು. ಆದುದರಿಂದ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕಿಡತಕ್ಕದ್ದೆಂದು ಹೇಳಿದ್ದಾನೆ ಯೇಸು ತನ್ನ ಸಾಮ್ಯದಲ್ಲಿ.

ಈ ಸಾಮ್ಯದಲ್ಲಿ ವಿಶೇಷವಾದ ಸತ್ಯವು ಅಡಕವಾಗಿದೆ, ಮಾನವನ ಆತ್ಮೀಕ ನೂತನ ಜೀವನದಲ್ಲಿ ಶಕ್ತಿಬಲಗಳು ಇರುವುದರಿಂದ ಅವುಗಳನ್ನು ಹಳೇ ಪದ್ದತಿಗಳಿಗೆ ಅನ್ವಯಿಸುವುದು ಸಾಧ್ಯವಿಲ್ಲ. ಜೀವವಿಲ್ಲದ ವಸ್ತುಗಳನ್ನು ಕತ್ತರಿಸಬಹುದು, ಎಳೆಯಬಹುದು ಮತ್ತು ಹಿಸಿಕುವುದರರಿಂದ ನಮಗೆ ಬೇಕಾದ ರೂಪಕ್ಕೆ ಬದಲಾಯಿಸಬಹುದು. ಆದರೆ ಜೀವದಲ್ಲಿ ಶಕ್ತಿಬಲಗಳು ಇರುವುದರಿಂದ ಹಾಗೆ ಮಾಡಲು ಸಾಧ್ಯವಿಲ್ಲ. ಜೀವನು ಮಾನವನ ಸ್ವಾಧೀನದಲ್ಲಿರುವುದಿಲ್ಲ, ಅವನ ಇಷ್ಟದ ಪ್ರಕಾರ ವರ್ತಿಸುವುದು ಅಸಾಧ್ಯ. ಹಾಗೇನಾದರೂ

ಬಲವಂತವಾಗಿ ಪ್ರಯತ್ನಿಸುವುದಾದರೆ ಅದರ ಅಂತ್ಯವು ಬಹು ಪರಿತಾಪಕರವಾದದ್ದು. ಜೀವವು ತನ್ನ ಸ್ವಂತ ಮಾರ್ಗದಲ್ಲಿ ಹೋಗುವುದಕ್ಕೆ ಅವಕಾಶವು ದೊರಕಿದರೆ ಅದು ಹೊಸಪದ್ಧತಿಗಳನ್ನು ಅನುಸರಿಸುವುದರಲ್ಲಿ ಆಶ್ಚರ್ಯವಿಲ್ಲ. ಮತೀಯ ಸಂಬಂಧವಾದ ಜೀವದ ಶಕ್ತಿಯು ಕಡಿಮೆಯಾಗಿರುವಾಗ ನೇಮಕವಾದ ಕ್ರಮ ಪದ್ಧತಿಗಳನ್ನು ಅನುಸರಿಸಲು ಅವುಗಳನ್ನು ಅನುಸರಿಸಲೇಬೇಕೆಂಬ ನಿಯಮವು ಪದ್ಧತಿಯಾಗುವುದು. ಮತಾಸಕ್ತಿಯು ಕಡಿಮೆಯಾಗಿರುವಾಗ ಆಚಾರಸಕ್ತಿಯು ಹೆಚ್ಚಾಗುವದು. ಒಬ್ಬನು ಪರಿಶುದ್ಧಾತ್ಮಾಧೀನವಾದರೆ ಲೋಕದ ಶತ್ರುಗಳಾಗಲೀ ಶಕ್ತಿಗಳಾಗಲಿ ಅವನನ್ನು ಬಂಧಿಸಲಾರದು. ಅಂಥಾ ಸಂಪೂರ್ಣವಾದ ಬಲವು ಆಚಾರಗಳಿಗಾಗಲಿ ಕ್ರಮಪದ್ಧತಿಗಳಾಗಲಿ ಒಳಪಡುವುದಿಲ್ಲ. ಜೀವವು ಸ್ವಾತಂತ್ರವುಳ್ಳದ್ದು ಅದು ಬೇರೆಬೇರೆ ಸೂತ್ರಗಳಿಂದ ಪ್ರವರ್ತನೆಗಳಲ್ಲಿ ಮಾತುಗಳಲ್ಲಿ ಪ್ರಕಟವಾಗುವುದು.

ಕ್ರಮ ಆಚಾರ ಪದ್ಧತಿಗಳು ಕ್ರೈಸ್ತಮತದ ಅನುಷ್ಠಾನಗಳಿಗೆ ಪ್ರಾಮುಖ್ಯವಾದವುಗಳಲ್ಲ ಎಂದು ತಿಳಿದುಕೊಳ್ಳೋಣ. ಹೊಸಜೀವವು ಹಳೆಯ ಪದ್ಧತಿಗಳಲ್ಲಿ ಕ್ರಮಗಳಲ್ಲಿ ಅಥವಾ ಸಂಪ್ರದಾಯವು ಮಾನವಾರಿಗೆ ಪ್ರಕಟವಾಗಲಿಲ್ಲ. ಹೊಸದ್ರಾಕ್ಷಾರಸವು ಅಂದರೆ ನೂತನ ಬೋಧನೆಯು ಸಿದ್ಧಾಂತದಿಂದ ಕೂಡಿದೆ ಹಾಗೂ ಈ ಸತ್ಯವಿಚರಗಳನ್ನು ತಿಳಿಸುವಾಗ ಬೇರೆಬೇರೆ ದೊಡ್ಡ ಸಭೆಗಳ ಸಂಪ್ರದಾಯದ ಅನುಕರಣೆಗೆ ವಿರೋಧವಾಗಿತ್ತು. ಆದಕಾರಣ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕಿಡುವುದರಿಂದ ಅದು ಒಡೆಯುವುದಿಲ್ಲ. ಆದಕಾರಣ ನಮ್ಮ ಜೀವಿತದಲ್ಲಿ ಬದಲಾವಣೆ ಮತ್ತು ಸತ್ಯವಿಷಯವನ್ನು ಮತ್ತು ಕ್ರಿಸ್ತನ ಬೊಧನೆಗೆ ಪರಿವರ್ತಿಸಿಕೊಳ್ಳಬೇಕಾಗಿದೆ.

ದೇವರ ರಾಜ್ಯದಲ್ಲಿ ಸೇರುವ ಮತ್ತು ನಿರೀಕ್ಷಿಸುವವರ ಜೀವನಕ್ಕೆ ಇದು ಅನ್ವಯಿಸುತ್ತದೆ. ಕ್ರಿಸ್ತನು ನಮ್ಮಲ್ಲಿ ವಾಸಿಸಬೇಕಾದರೆ ಆತನು ಕೊಟ್ಟ ದೈವ ವಾಕ್ಯಗಳು ನಮ್ಮಲ್ಲಿರಬೇಕು. ಲೂಕ 11:28ರಲ್ಲಿ ತಿಳಿಸಿರುವುದನ್ನು ನೋಡುವಾಗ–"ದೇವರ ವಾಕ್ಯವನ್ನು ಕೇಳಿ ಅದಕ್ಕೆ ಸರಿಯಾಗಿ ನಡಕೊಳ್ಳುವವರೇ ಧನ್ಯರು" ಮತ್ತು ಲೂಕ 12:31–"ನೀವಾದರೋ ದೇವರ ರಾಜ್ಯಕ್ಕಾಗಿ ತವಕಪಡಿರಿ, ಇದರ ಕೂಡ ಅವು ನಿಮಗೆ ದೊರಕುವವು". ಒಬ್ಬನು ಕ್ರಿಸ್ತನಲ್ಲಿದ್ದೇನೆಂದು ಹೇಳಿ ಪ್ರಾಪಂಚಿಕ ವಿಷಯಗಳಲ್ಲಿ ಸಾರ್ಥಕತೆಯಲ್ಲಿ ಜೀವಿಸುವುದಾದರೆ ನಿರರ್ಥಕವೇ. ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು (2ಕೊರಿಂಥ 5:17). ಹೊಸ ಜೀವಿತವು ಹೊಸನಡತೆಯಿಂದ ಪ್ರಕಟವಾಗುವುದು. ಹೀಗೆ ಹೊಸ ದ್ರಾಕ್ಷಾರಸವು ಹೊಸ ಬುದ್ದಲಿಗಳನ್ನು ಕಂಡುಕೊಳ್ಳುವುದು. ಒಬ್ಬನ ಹೃದಯದಲ್ಲಿ (ಮನಸ್ಸು) ಕ್ರಿಸ್ತನ ಮೇಲಣ ಪ್ರೀತಿಯಿರುವುದಾದರೆ ಪ್ರಾಪಂಚಿಕ ಜೀವನದಲ್ಲಿ ಜೀವಿಸುವುದು ಅಸಾಧ್ಯ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ(ರೋಮಾ 8:9). ಆದುದರಿಂದ ದೇವರ ರಾಜ್ಯವು ನಮ್ಮ ಗುಣ, ಸ್ವಭಾವ ಮತ್ತು ನಡತೆಗಳ ಮೂಲಕವೇ ಕಂಡುಬರಲಾಗಿ ನಾವು ಆ ರಾಜ್ಯದ(ದೇವರರಾಜ್ಯ) ಪ್ರಜೆಗಳಾಗಬಹುದು.

ಸತ್ಯವೇದ ಆಧಾರಿತ **ವೈ.ನರೋನ್‌ದೇವ ಪ್ರಸಾದ್**
ಮಂಡ್ಯ.